# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ತಾಲ್ಲೂಕು, ಹೆಬ್ಬೂರು ಮತ್ತು ಗೂಳೂರು ಹೋಬಳಿಯ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ಏತ ನೀರಾವರಿ ಯೋಜನೆ ಮಂಜೂರು ಮಾಡುವ ಬಗ್ಗೆ.

++ ++ ++

ಓದಲಾಗಿದೆ:-

ಮುಖ್ಯ ಇಂಜನಿಯರ್, ಹೇಮಾವತಿ ನಾಲಾ ವಲಯ, ತುಮಕೂರು, ರವರ ಪತ್ರ ಸಂಖ್ಯೆ:CE/HCZT/TA-1/AE-5/Gulur-Hebbur Hobli village drinking water Lift Irrigation Scheme/2000-01/3808, ದಿನಾಂಕ:23-2-2001.

ಪ್ರಸ್ತಾವನೆ:-

ಮೇಲೆ ಓದಲಾದ ಮುಖ್ಯ ಇಂಜನಿಯರ್, ಹೇಮಾವತಿ ನಾಲಾ ವಲಯ, ತುಮಕೂರು, ರವರು ತಮ್ಮ ಪತ್ರದಲ್ಲಿ ತುಮಕೂರು ತಾಲ್ಲೂಕಿನ, ಗೂಳೂರು ಮತ್ತು ಹೆಬ್ಬೂರು ಹೋಬಳಿಗಳ ಬಹುತೇಕ ಗ್ರಾಮಗಳು ತೀವ್ರ ಅಭಾವ ಪೀಡಿತ ಗ್ರಾಮಗಳಾಗಿದ್ದು ಜನ ಮತ್ತು ಜಾನುವಾರುಗಳ ಕುಡಿಯುವ ನೀರಿಗೆ ಬವಣೆಯಾಗಿರುವುದರಿಂದ, ಕುಡಿಯುವ ನೀರಿನ ವ್ಯವಸ್ಥೆಗಾಗಿ ಸದರಿ ಗ್ರಾಮಗಳ ಕೆರೆಗಳಿಗೆ ಹೇಮಾವತಿ ನಾಲೆಯಿಂದ ಏತ ನೀರಾವರಿ ಮೂಲಕ ನೀರು ಸರಬರಾಜು ಮಾಡಲು ಯೋಜನೆಯನ್ನು ಕೈಗೊಳ್ಳಲು ಲೆಕ್ಕ ಶೀರ್ಷಿಕೆ - 4701 - 80 - 800 - ಅಡಿಯಲ್ಲಿ ರೂ.33.00 ಕೋಟಿಗಳ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

2) ಸದರಿ ಯೋಜನೆಗೆ ಹೇಮಾವತಿ ನಾಲೆಯಿಂದ ತುಮಕೂರು ಶಾಖಾ ನಾಲೆಯು 148 ನೇ ಕಿ.ಮೀ.ನಲ್ಲಿ ಸರಪಳಿ 147500 ರಲ್ಲಿ 0.7 ಟಿ.ಎಂ.ಸಿ ನೀರನ್ನು 500 ಅಶ್ವಶಕ್ತಿಯ ಪಂಪ್‌ಗಳ ಮೂಲಕ ನೀರನ್ನು ಎತ್ತಿ ಗೂಳೂರು ಮತ್ತು ಹೆಬ್ಬೂರು ಹೋಬಳಿಗಳ ಒಟ್ಟು 54 ಕೆರೆಗಳಿಗೆ ಅತಿ ಹೆಚ್ಚಿನ ಎತ್ತರದಲ್ಲಿರುವ ದೇವರಅಮಾನಿಕೆರೆಗೆ ನೀರನ್ನು ತುಂಬಿಸಿಕೊಂಡು 52 ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲು ಉದ್ದೇಶಿಸಿ ಯೋಜನೆಯನ್ನು ತಯಾರಿಸಿರುತ್ತಾರೆ. ಯೋಜನೆ ಅಂದಾಜನ್ನು ತಾಂತ್ರಿಕ ಸಲಹಾ ಸಮಿತಿ ಹಾಗೂ ಬೃಹತ್ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿಗಳು ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಶಿಫಾರಸ್ಸು ಮಾಡಿರುತ್ತದೆ. 2002-03 ನೇ ಸಾಲಿನ ಆಯವ್ಯಯದಲ್ಲಿ ಹೇಮಾವತಿ ಯೋಜನೆಗೆ ಲೆಕ್ಕ ಶೀರ್ಷಿಕೆ 4701-80-800 ರ ಅಡಿಯಲ್ಲಿನ ರೂ.10.00 ಲಕ್ಷಗಳು ಅನುದಾನದಡಿ ಭರಿಸಲು ಯೋಜಿಸಲಾಗಿದೆ.

3) ರಾಜ್ಯದಲ್ಲಿ ಈಗ ಅಸ್ತಿತ್ವದಲ್ಲಿರುವ ಏತ ನೀರಾವರಿ ಯೋಜನೆಗಳ ಕಾರ್ಯನಿರ್ವಹಣೆಯನ್ನು ಇವುಗಳಿಗೆ ಬೇಕಾಗುವ ವಿದ್ಯುಚ್ಛಕ್ತಿ ದೊರಕುತ್ತಿರುವ ಸ್ಥಿತಿ ಇವುಗಳ ನಿರ್ವಹಣೆಯಲ್ಲಿ ಸ್ಥಳೀಯ ಜನರು ಪಾಲಗೊಳ್ಳುತ್ತಿರುವ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ರಾಜ್ಯದ ಏತ ನೀರಾವರಿ ಯೋಜನೆಗಳ ಬಗ್ಗೆ ಒಂದು ಸಮಗ್ರ ನೀತಿ ನಿರೂಪಿಸಿ ಅದರಡಿ ರಾಜ್ಯದಲ್ಲಿರುವ ಎಲ್ಲಾ ಏತ ನೀರಾವರಿ ಯೋಜನೆಗಳು ಕೈಗೆತ್ತಿಕೊಳ್ಳುವಂತೆ ನಿರ್ಧರಿಸಲಾಯಿತು.

TA-1)

........2..,

-277-



4) ಈ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 82 ಎಸ್‌ಹೆಚ್‌ಸಿ 2001, ಬೆಂಗಳೂರು ದಿನಾಂಕ:21-10-2002</u>

ತುಮಕೂರು ತಾಲ್ಲೂಕಿನ, ಗೂಳೂರು ಮತ್ತು ಹೆಬ್ಬೂರು ಹೋಬಳಿಗಳ 54 ಕೆರೆಗಳ ಮೂಲಕ 52 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ತಯಾರಿಸಲಾಗಿರುವ ರೂ.33.00 ಕೋಟಿಗಳ (ರೂಪಾಯಿ ಮೂವತ್ತಮೂರು ಕೋಟಿಗಳು ಮಾತ್ರ) ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲು ರಾಜ್ಯದಲ್ಲಿ ರೂಪಿಸಲಾದ ಏತ ನೀರಾವರಿ ಯೋಜನೆಗಳ ನೀತಿಯನ್ನು ನಿರೂಪಿಸುವ ಎಲ್ಲ ಅಂಶಗಳನ್ನು ಅಳವಡಿಸಿ ವಿವರವಾಗಿ ಅಂದಾಜನ್ನು ತಯಾರಿಸಿ ತಾಂತ್ರಿಕ ಅನುಮೋದನೆ ನೀಡುವ ಮೊದಲು ಸರ್ಕಾರದ ಅನುಮತಿ ಪಡೆದು ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳತಕ್ಕದ್ದು.
2. ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ - 4701-80-800 ಹೇಮಾವತಿ ಯೋಜನೆ - ಅಡಿಯಲ್ಲಿ ಭರಿಸತಕ್ಕದ್ದು.

2. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಯೋಇ 217 ಆರ್‌ಎಲ್-1 2002 ದಿನಾಂಕ:22-2-2002ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/10
(ಎ.ಎಲ್.ಜಗದೀಶ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ, ಎಂಎಂಐ-3),
ಜಲ ಸಂಪನ್ಮೂಲ ಇಲಾಖೆ.

<u>ಇವರಿಗೆ</u>:-

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು
3. ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳಿಗೆ
4. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ (ಆರ್ಥಿಕ ಕೋಶ), ಲೋಕೋಪಯೋಗಿ ಇಲಾಖೆ.
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
6. ಸರ್ಕಾರದ ಉಪಕಾರ್ಯದರ್ಶಿಗಳು ಸಚಿವ ಸಂಪುಟ ಶಾಖೆ (ಟಿಪ್ಪಣಿ ಸಂಖ್ಯೆ:ಸಿ. 303/2002-ದಿ:13-8-02)
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

# ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 82 ಎನ್‌ಹೆಚ್‌ಕಿ 2002

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:3 ೧-10-2002.

## ಅಡೆಂಡಮ್

ವಿಷಯ: ತುಮಕೂರು ತಾಲ್ಲೂಕು, ಹೆಬ್ಬೂರು ಮತ್ತು ಗೂಳೂರು ಹೋಬಳಿಯ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ಏತ ನೀರಾವರಿ ಯೋಜನೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಜಸಂಇ 82 ಎನ್‌ಹೆಚ್‌ಕಿ 2002, ದಿ:21-10-2002.

******

ಉಲ್ಲೇಖ ಸರ್ಕಾರಿ ಆದೇಶದಲ್ಲಿನ ಆದೇಶ ಭಾಗದ (1) ಮತ್ತು (2) ಷರತ್ತುಗಳ ನಂತರ ಈ ಕೆಳಕಂಡ ಷರತ್ತನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

(3) ಸದರಿ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ಎಲ್.ಜಗದೀಶ್) 31/10/02
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ, ಎಂಎಂಐ-3),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮುಖ್ಯ ಇಂಜನಿಯರ್, ಹೇಮಾವತಿ ನಾಲಾ ವಲಯ, ತುಮಕೂರು
3. ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳಿಗೆ
4. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ (ಆರ್ಥಿಕ ಕೋಶ), ಲೋಕೋಪಯೋಗಿ ಇಲಾಖೆ.
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
6. ಸರ್ಕಾರದ ಉಪಕಾರ್ಯದರ್ಶಿಗಳು ಸಚಿವ ಸಂಪುಟ ಶಾಖೆ (ಟಿಪ್ಪಣಿ ಸಂಖ್ಯೆ:ಸಿ. 303/2002 ದಿ:13-8-02)
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು